**OS NO.51/2022**
**PW-1**
(Shakuntala)

**ಸಾಕ್ಷಿಯನ್ನು ಇಂದು ದಿನಾಂಕ 12.03.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಮುಖ್ಯ ವಿಚಾರಣೆಃ ಶ್ರೀ ಎನ್ ಆರ್ ವಾದಿ ಪರ ವಕೀಲರಿಂದ**

ನಾನು ಹೊಲವನ್ನು ಸರ್ವೆ ಮಾಡಿಸುವಾಗ ಪ್ರತಿವಾದಿಯರಿಗೆ ನೋಟಿಸ್ಸು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ಗೊತ್ತಾಗದಂತೆ ಸುಳ್ಳು ವರದಿ ತಯಾರಿಸಿ ಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸಿದ ನಂತರ ಪ್ರತಿವಾದಿಯರು ಸಹ ಹೊಲವನ್ನು ಸರ್ವೆ ಮಾಡಿಸಿರುತ್ತಾರೆ ಎಂದರೆ ಸರಿ. ಆಗ ಪ್ರತಿವಾದಿಯರು ನನ್ನ ಜಮೀನುದಲ್ಲಿ ಯಾವುದೇ ವತ್ತುವರಿ ಮಾಡಿಲ್ಲ ಎಂದು ಸರ್ವೆ ವರದಿ ಆಗಿರುತ್ತದೆ ಎಂದರೆ ಸುಳ್ಳು. ಪ್ರತಿವಾದಿಯರು ಸರ್ವೆ ಮಾಡಿಸುವಾಗ ನಾನು ಸಹ ಹಾಜರು ಇದ್ದೆ ಎಂದರೆ ಸರಿ. ನಾನು ಪ್ರತಿವಾದಿಯರು 7 ಗುಂಟೆ ಜಮೀನನ್ನು ಅದು ನನ್ನ ಜಮೀನುದಲ್ಲಿ ವತ್ತುವಾರಿಯಾಗಿದ್ದೆ ಎಂದು ಸುಳ್ಳು ಕಾರಣ ಮುಂದೆ ಮಾಡಿ ಅವರ ವಿರುದ್ಧ ಖೊಟ್ಟಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ಮಾಪಿನಲ್ಲಿ ಹೇಳಲಾದಂತೆ ಪ್ರತಿವಾದಿಯರು 7 ಗುಂಟೆ ನನ್ನ ಜಮೀನನ್ನು ವತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಎಷ್ಟು ಹೂಲ ವತ್ತುವರಿ ಮಾಡಿರುತ್ತಾರೆ ಮತ್ತು 2 ನೇ ಪ್ರತಿವಾದಿ ಎಷ್ಟು ಹೊಲ ವತ್ತುವರಿ ಮಾಡಿರುತ್ತಾರೆ ಎಂದು ನನ್ನ ಸರ್ವೆ ರಿಪೋಟ ದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ವತ್ತುವರಿಯ ಪ್ರಮಾಣ ಪತ್ರ ಪಡೆದು ಕೊಂಡು ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಸಿವಿಲ್ ನ್ಯಾಯಾಧೀಶರು
ಸೇಡಂ.